## ಥಟ್ ಅಂತ 'ಚಂದನವನ'ವನ್ನೂ ನೋಡಿ

ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ಮೊದ ಮೊದಲು 'ಚಂದನವನ'ಕ್ಕೆ ಸಂಬಂಧಿಸಿದಂತೆ ಒಂದೆರಡು ಪ್ರಶ್ನೆಗಳು ಇರುತ್ತಿದ್ದವು. ಈಗ ಅದು ಕಾಣಿಸುತ್ತಿಲ್ಲ. ಕನ್ನಡ ಸಿನಿಮಾ ಕೂಡ ತನ್ನದೇ ಆದ ಕೊಡುಗೆಯನ್ನು ಸಮಾಜಕ್ಕೆ ಕೊಟ್ಟಿದೆ. ಅದರ ಹಿರಿಮೆ ಗರಿಮೆಯ ಕಾರಣಕ್ಕೆ ಹಲವು ಮನ್ನಣೆಗೂ ಅದು ಪಾತ್ರವಾಗಿದೆ. ಹಾಗಾಗಿ ಕನ್ನಡ ಸಿನಿಮಾಗಳಿಗೆ ಸಂಬಂಧಿಸಿದಂತೆ ರಸಪ್ರಶ್ನೆಗಳನ್ನು ರೂಪಿಸುವಂತೆ ಆಗಲಿ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

## ಕ್ರೌರ್ಯ ಶೌರ್ಯವಲ್ಲ

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಧಾರಾವಾಹಿ ಸಮಾಜಕ್ಕೆ ಏನನ್ನು ಕೊಡುತ್ತಿದೆ ಎನ್ನುವ ಪ್ರಶ್ನೆ ಕಾಡುತ್ತಿದೆ. ಸಮಾಜಘಾತುಕ ಶಕ್ತಿಗಳ ಕ್ರೌರ್ಯವನ್ನೇ ಅದರಲ್ಲಿ ಬಿಂಬಿಸುತ್ತಿರುವುದು ಯಾವ ಹಿರಿಮೆಗೆ ಎನ್ನುವುದು ಗೊತ್ತಾಗುತ್ತಿಲ್ಲ. ಖಳನಾಯಕಿ ಸಿಂಗಾರಮ್ಮ ಮತ್ತು ಅವಳ ಮಗ ಸೇರಿ ಜಿಲ್ಲಾಧಿಕಾರಿಯ ಕಾರನ್ನೇ ಅಪಘಾತಕ್ಕೆ ಈಡು ಮಾಡುತ್ತಾರೆ. ಕಥೆಗೆ ತಿರುವು ಕೊಡಲು ಇಂತಹ ಯೋಚನೆಯನ್ನು ಮಾಡಬಾರದು. ಸಹಜ ಮತ್ತು ವಾಸ್ತವಕ್ಕೆ ಹತ್ತಿರವಾಗುವಂತೆ ಕಥೆಯನ್ನು ನಿರೂಪಿಸುವುದು ತಂಡದ ಜವಾಬ್ದಾರಿ.

—ಕೆ.ಎಸ್. ಪ್ರಭಾಕರ ಗುಪ್ತ, ಹಾಸನ

## ಲಕ್ಷ್ಮೀಗೆ ಶಕ್ತಿ ಇಲ್ಲ

ಝೀ ಕನ್ನಡದ 'ಲಕ್ಷ್ಮೀ ನಿವಾಸ' ಚೆನ್ನಾಗಿ ಮೂಡಿಬರುತ್ತಿದೆ. ಅದನ್ನು ನೋಡಲು ನಿಜಕ್ಕೂ ಸಂತೋಷ ಅನ್ನಿಸುತ್ತದೆ. ಲಕ್ಷ್ಮೀ ಪಾತ್ರಧಾರಿ ಧ್ವನಿಗೆ ಒಂದಿಷ್ಟು ಶಕ್ತಿ ಅಗತ್ಯವಿದೆ. ಏಕೆಂದರೆ, ಆಕೆಯ ಕ್ಷೀಣ ಧ್ವನಿ ಕೇಳಿಸುವುದೇ ಇಲ್ಲ. ಸ್ವಲ್ಪ ಜೋರಾಗಿ ಮಾತನಾಡುವಂತೆ ನಿರ್ದೇಶಕರು ಸೂಚಿಸುವುದು ಒಳಿತು. ಉಳಿದ ಪಾತ್ರಗಳಂತೆ ಆಕೆಯ ಮಾತಿಗೂ ಸೌಂಡ್ ಇದ್ದರೆ ಮಾತ್ರ ಕಥೆಯ ಮಹತ್ವ ಪರಿಣಾಮಕಾರಿಯಾಗಿ ಅನುಸಂಧಾನ ಆಗಲು ಸಾಧ್ಯ.

—ಚನ್ನಮ್ಮ ಚಿಕ್ಕಣ್ಣ, ಬೆಂಗಳೂರು

ವಾರದ ಪತ್ರ

## ಉತ್ತರ ಪ್ರತಿಕೆ ಬಹಿರಂಗ, ಹೇಗೆ?

ಮುಡಾ ಸೈಟ್ ಹಂಚಿಕೆ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಿನ ಲೋಕಾಯುಕ್ತ ಕಚೇರಿಗೆ ತೆರಳಿ ವಿಚಾರಣೆ ಎದುರಿಸಿದರು. ಆ ಸಂದರ್ಭದಲ್ಲಿ ಲೋಕಾಯುಕ್ತ ಕಚೇರಿಯ ನೂರಾರು ಅಡಿ ದೂರದಿಂದಲೇ ಪೊಲೀಸರು ಬ್ಯಾರಿಕೇಡ್ ಹಾಕಿ ಬಂದೋಬಸ್ತ್ ಮಾಡಿದ್ದರು. ಮಾಧ್ಯಮದವರಿಗೂ ಒಳಗೆ ಪ್ರವೇಶ ಇರಲಿಲ್ಲ.

ಮುಖ್ಯಮಂತ್ರಿ ವಿಚಾರಣೆ ಮುಗಿಸಿ ಹೊರಬರುತ್ತಿದ್ದಂತೆಯೇ ಲೋಕಾಯುಕ್ತರು ಕೇಳಿದ ಪ್ರಶ್ನೆಗಳು ಡಿಜೆ ಮ್ಯೂಸಿಕ್ ಸಹಿತ ವರದಿಯಾದವು. ನಾಲ್ಕು ಗೋಡೆಗಳ ಮಧ್ಯೆ ತನಿಖಾಧಿಕಾರಿಗಳು ರಹಸ್ಯವಾಗಿ ನಡೆಸಿದ ವಿಚಾರಣೆ ಮಾಧ್ಯಮಗಳಿಗೆ ಹೇಗೆ ತಿಳಿಯಿತು? ಪ್ರಶ್ನೆ ಪತ್ರಿಕೆ ಬಹಿರಂಗವಾಗುವುದು ಸಹಜ. ಆದರೆ ಇಲ್ಲಿ ಉತ್ತರ ಪತ್ರಿಕೆಯೂ ಬಹಿರಂಗ ಆದುದು ಹೇಗೆ?

—ಪಿ.ಜೆ. ರಾಘವೇಂದ್ರ, ಮೈಸೂರು

## ಕೋರ್ಟ್‌ಗಳ ಜಾಹೀರಾತು ನಿಲ್ಲಲಿ

ದಿನಬಳಕೆಯ ವಸ್ತುಗಳ ಜಾಹೀರಾತಿಗಾಗಿ ಕೋರ್ಟ್ ದೃಶ್ಯವನ್ನು ಬಳಸಬಾರದು. ಇದರಿಂದ ನ್ಯಾಯಾಲಯದ ಘನತೆ ಕುಗ್ಗುತ್ತದೆ. ಅದನ್ನು ನ್ಯಾಯಾಲಯವೇ ಮಧ್ಯಪ್ರವೇಶಿಸಿ ನಿಲ್ಲಿಸಬೇಕು ಎಂದು ಇದೇ ಅಂಕಣದಲ್ಲಿ ಕೆಲವು ವಾರಗಳ ಹಿಂದೆ ಬರೆದಿದ್ದೆ. ಆದರೆ ಅದು ಹಾಗೆಯೇ ಮುಂದುವರೆದಿದೆ.

ಇತ್ತೀಚೆಗೆ ಯಾವುದೋ ಒಂದು ಬ್ರಾಂಡಿನ ಚಪ್ಪಲಿಯ ಜಾಹೀರಾತಿಗಾಗಿ ಕೋರ್ಟ್ ದೃಶ್ಯವನ್ನು ಬಳಸಿಕೊಂಡಿದ್ದಾರೆ. ಅಷ್ಟೇ ಅಲ್ಲ, ಆ ಜಾಹೀರಾತಿನಲ್ಲಿ ನ್ಯಾಯಾಧೀಶರ ಪಾತ್ರವನ್ನು ಒಬ್ಬ ಬಫೂನಿನಂತೆ ಚಿತ್ರಿಸಲಾಗಿದೆ. ಅದು ನ್ಯಾಯಾಲಯದ ಘನತೆಯನ್ನು ಆಡಿಕೊಂಡಂತೆ ಆಗುತ್ತದೆ. ಇಂತಹ ಜಾಹೀರಾತುಗಳು ನಿಲ್ಲುವುದು ಯಾವಾಗ?

—ಮುರಲೀಧರ ಕುಲಕರ್ಣಿ, ಬೀದರ್

## ಸಿಹಿ ಹಂಚಬೇಕಿತ್ತು!




ಸ್ಟಾರ್ ಸುವರ್ಣದ ಜನಪ್ರಿಯ ಅಡುಗೆ ಕಾರ್ಯಕ್ರಮ 'ಬೊಂಬಾಟ್ ಭೋಜನ'ದಲ್ಲಿ ಸಿಹಿಕಹಿ ಚಂದ್ರು ಅವರು ಮಕ್ಕಳ ದಿನಾಚರಣೆಯ ಅಂಗವಾಗಿ ಶಾಲಾ ಮಕ್ಕಳಿಗೆ ಖಾರದ ಅವಲಕ್ಕಿ ಚೂಡಾ ಬದಲಿಗೆ ಮಕ್ಕಳಿಗೆ ಇಷ್ಟವಾದ ಒಂದು ಸಿಹಿ ತಿಂಡಿಯನ್ನು ಮಾಡಿ ಹಂಚಿದ್ದರೆ ಸೂಕ್ತವಾಗಿರುತ್ತಿತ್ತೇನೋ? ಎಷ್ಟೇ ಆಗಲಿ ಮಕ್ಕಳಿಗೆ ಸಿಹಿ ತಿಂಡಿ ಆದ್ಯತೆ ಅಲ್ಲವೇ?

—ನಳಿನಿ ಆರ್. ಮಾಗಲ್

## ನಮಗೆಂದು ಬಿಡುಗಡೆ?

ಧಾರಾವಾಹಿಗಳ ನಿರ್ದೇಶಕರು, ವೀಕ್ಷಕರೆಲ್ಲರೂ ಕಿವಿಯ ಮೇಲೆ ಹೂ ಇಟ್ಟುಕೊಂಡಿರುತ್ತಾರೆ ಎಂದು ತಿಳಿದಂತೆ ಕಾಣಿಸುತ್ತಿದೆ. ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ' ಹಾಗೂ 'ಲಕ್ಷ್ಮೀ ಬಾರಮ್ಮ' ಧಾರಾವಾಹಿಗಳ ಕೆಲವು ಪಾತ್ರಧಾರಿಗಳಿಗೆ ಕ್ಯಾಮೆರಾ ಮತ್ತು ಮೊಬೈಲ್‌ನಲ್ಲಿ ಇರುವ ರೆಕಾರ್ಡಿಂಗ್ ವ್ಯವಸ್ಥೆಯನ್ನು ಹೇಳಿಕೊಟ್ಟರೆ ಎರಡೂ ಸೀರಿಯಲ್‌ಗಳು ಒಂದೆರಡು ದಿನಗಳಲ್ಲಿ ಮುಗಿಸಬಹುದು. ಭಾಗ್ಯಲಕ್ಷ್ಮಿಯಂತೂ ಎಡಗಿವಿಯಲ್ಲಿ ಕೇಳಿದ್ದನ್ನು ಬಲಗಿವಿಯಲ್ಲಿ ಕೇಳುವವರೆಗೂ ನಂಬದಂತಹ ಪರಿಸ್ಥಿತಿ. ಇದರಿಂದ ನಮಗೆ ಎಂದು ಬಿಡುಗಡೆ?

—ಹಯಮನಗೋಳಿ

## ಮೂಢನಂಬಿಕೆ, ಮಕ್ಕಳ ಪೋಷಣೆ

ನಂಬಲು ಅಸಾಧ್ಯವಾದ ಮಾಟ ಮಂತ್ರ ತಂತ್ರಗಳ ದೃಶ್ಯಗಳನ್ನು ಪುಷ್ಟೀಕರಿಸಿ ಕಥೆಯನ್ನು ಅನವಶ್ಯಕವಾಗಿ ಟೀವಿ ವಾಹಿನಿಗಳು ಬೆಳೆಸುತ್ತಾ ಹೋಗುತ್ತಿವೆ. ಪ್ರತಿ ಧಾರಾವಾಹಿಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಮೂಢನಂಬಿಕೆಯನ್ನು ಹೆಣೆಯುತ್ತಾರೆ. ಅದರ ದೃಶ್ಯ ಕಥೆಗೆ ಪೂರಕ ಅಲ್ಲದಿದ್ದರೂ ಉದ್ದೇಶಪೂರ್ವಕವಾಗಿ ಸೇರಿಸಿ ಕಥೆಯನ್ನು ಎಳೆಯುತ್ತಿರುವುದು ತೀರಾ ಅಸಹನೀಯ.

ಪುಟ್ಟ ಮಕ್ಕಳ ಪಾತ್ರ ಪೋಷಣೆ ನೋಡಿದರೆ ಗಾಬರಿ ಆಗುತ್ತದೆ. ಪುಟ್ಟ ಮಕ್ಕಳ ಮುಗ್ಧ ಮನಸ್ಸನ್ನು ಗಾಸಿಗೊಳಿಸುವ ದೃಶ್ಯಗಳ ಪ್ರಸಾರ ಆಗುತ್ತಲೇ ಇದೆ. ಏನಾದರೂ ಆಗಲಿ ಹಾಗೂ ಹೀಗೂ ಆಯಾ ದಿನದ ಸಂಚಿಕೆ ಸಿದ್ಧಮಾಡುವುದರಲ್ಲಿ ಮಾತ್ರ ಧಾರಾವಾಹಿ ನಿರ್ಮಾಪಕರು ಸಿದ್ಧಹಸ್ತರು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಶೋಷಣೆಯ ವಿಜೃಂಭಣೆ

ಝೀ ಕನ್ನಡದ 'ಬ್ರಹ್ಮಗಂಟು'ವಿನಲ್ಲಿ ಮನೆಯ ಸೊಸೆ ದೀಪಾಳಿಗೆ ಓರಗಿತ್ತಿ ಸೌಂದರ್ಯ ಕೊಡುತ್ತಿರುವ ಕಿರುಕುಳ ಅತಿಯಾಗಿದೆ. ಆ ಹಿಂಸೆಯನ್ನೇ ವಿಜೃಂಭಿಸಿ ರಂಜಿಸುತ್ತಿದ್ದಾರೆ ಎಂದು ಅನ್ನಿಸುತ್ತಿದೆ. ಯಾವುದೇ ಮಹಿಳೆಗೆ ಅನ್ಯಾಯವಾದರೂ ಪ್ರಶ್ನಿಸಬೇಕಾದ ಈ ಕಾಲದಲ್ಲಿ ಇಂತಹ ಕಪೋಲಕಲ್ಪಿತ ಕಥೆಯನ್ನು ಏಕೆ ಹೇಳುತ್ತಾರೆ? ದೀಪಾಳ ತವರು ಮನೆಯಲ್ಲಿ ಪೂಜೆ ನಡೆಯುತ್ತಿರುತ್ತದೆ. ಆಗ ಚೇಳೊಂದು ಬರುತ್ತದೆ. ಮನೆ ತುಂಬ ಜನ ಇರುತ್ತಾರೆ. ಆದರೂ ಅದನ್ನು ಯಾರಿಗೂ ಹೇಳದೆ ಮೌನವಾಗಿ ತಾನೇ ಅದನ್ನು ಆಕೆ ಹಿಡಿಯುತ್ತಾಳೆ. ಕೊನೆಗೆ ಅದು ಕಚ್ಚಿ ಮೂರ್ಛೆ ಹೋಗುತ್ತಾಳೆ. ಇದೆಲ್ಲ ಅವೈಜ್ಞಾನಿಕ ಅಲ್ಲವೇ?

—ಸಿ.ಕೆ. ಗಣಪ್ಪನವರ, ಮುಂಡರಗಿ